


**ಗುಂಡ:** ಇಬ್ಬರು ಮಹಿಳೆಯರನ್ನು ಮದುವೆ ಆದವರಿಗೆ ಕಾನೂನು ಯಾವ ಶಿಕ್ಷೆ ಕೊಡುತ್ತದೆ?
**ಮಂಡ:** ಬೇರೆ ಶಿಕ್ಷೆ ಯಾಕೆ ಬೇಕು? ಅವನಿಗೆ ಇಬ್ಬರು ಅತ್ತೆಯರು ಇರುತ್ತಾರೆ ಅನ್ನೋದನ್ನು ನೆನಪಿಟ್ಟುಕೊ.

***

**ಸುಬ್ಬ:** ಏನಪ್ಪ, ನಿನ್ನ ಹೊಸ ನೌಕರಿ ಹೇಗಿದೆ?
**ಮಬ್ಬ:** ಹೊಸ ನೌಕರಿಯಲ್ಲಿ ನನಗೆ ಮೊದಲಿಗಿಂತಲೂ ಹೆಚ್ಚು ಸ್ವಾತಂತ್ರ್ಯವಿದೆ.
**ಸುಬ್ಬ:** ಹೇಗೆ?
**ಮಬ್ಬ:** ಇಲ್ಲಿ ಮುಂಜಾನೆ ಒಂಬತ್ತರೊಳಗಾಗಿ ಬಂದು ಸಾಯಂಕಾಲ ಐದರ ನಂತರ ಬೇಕಾದಾಗ ಮನೆಗೆ ಹೋಗಬಹುದು.

***

**ಮಾಜಿ ಕವಿ:** ನಾನು ಕಾಲೇಜಿನಲ್ಲಿದ್ದಾಗ ಎಮ್ಮೆಯ ಮೇಲೊಂದು ಕವನ ಬರೆದಿದ್ದೆ.
**ಹೆಂಡತಿ:** ಯಾಕೆ ಕಾಗದ ಇರಲಿಲ್ಲವೇ ನಿಮ್ಮ ಹತ್ತಿರ?

***

ಪೇಪರ್ ಓದುವುದರಲ್ಲಿ ಮಗ್ನರಾಗಿಯೂ ಹೆಂಡತಿಯ ಮಾತಿಗೆ ಹೂಂಗುಡುತ್ತಿದ್ದ ರಾಯರಿಗೆ ಹೆಂಡತಿ ಹೀಗೆ ಹೇಳಿದಳು...
**ಹೆಂಡತಿ:** ನಾನು ಮಾತು ಮುಗಿಸಿ ಐದು ನಿಮಿಷವಾಯಿತು. ಹೂಂ ಅನ್ನುವುದನ್ನು ನಿಲ್ಲಿಸಿರಿ.

***

**ಜ್ಯೋತಿಷಿ:** ಏನಮ್ಮಾ, ನಿಮಗೆ ನಿಮ್ಮ ಯಜಮಾನರ ಭವಿಷ್ಯ ಹೇಳಲೆ?
**ಅಮ್ಮ:** ಊಹುಂ... ಬೇಡ. ಅವರ ಭವಿಷ್ಯ ನನ್ನ ಕೈಯಲ್ಲಿದೆ. ನನಗೆ ಅವರ ಭೂತಕಾಲ ಹೇಳಿ.

***





'ವರುಣನ ಕೃಪೆ'... ಯುದ್ಧದ ಮಧ್ಯೆಯೇ ಕೆಲವು ದಿನಗಳ ಇಂಧನ ಪೂರೈಕೆಯಾಯ್ತು.

ಮುಂಜಾನೆ ನಾಯಿಯೊಂದಿಗೆ ವಾಕಿಂಗ್ ಮಾಡಿ ಗುಂಡ ಮನೆಗೆ ಮರಳುತ್ತಿದ್ದಾಗ ಮಿತ್ರನೊಬ್ಬ ದಾರಿಯಲ್ಲಿ ಸಿಕ್ಕ.
**ಮಿತ್ರ:** ಈ ಕತ್ತೆಯೊಂದಿಗೆ ಎಲ್ಲಿಗೆ ಹೋಗಿದ್ದೆ?
**ಗುಂಡ:** ಇದು ನಾಯಿ, ಕತ್ತೆಯಲ್ಲ.
**ಮಿತ್ರ:** ನಾನು ನಿನಗೆ ಕೇಳುತ್ತಿಲ್ಲ, ನಾಯಿಗೆ ಕೇಳುತ್ತಿದ್ದೇನೆ.

***

ಕೀಚಕ ವಧೆ ನಾಟಕ ನಡೆದಿತ್ತು. 'ಕೀಚಕ' ಪಾತ್ರಧಾರಿ 'ಭೀಮ' ಪಾತ್ರಧಾರಿಯ ಎದೆಯ ಮೇಲೆ ಕೂತು ಗುದ್ದುತ್ತಿದ್ದ. ಭೀಮ ಪಿಸುಮಾತಿನಲ್ಲಿ ಕೀಚಕನಿಗೆ ಹೀಗೆ ಹೇಳಿದ...
**ಭೀಮ:** ಸಾಕು ನಿಲ್ಲಿಸು, ಇನ್ನು ನೀನು ಕೆಳಗೆ ಬೀಳು, ನಾನು ಗುದ್ದುತ್ತೇನೆ.
**ಕೀಚಕ:** (ಮೆಲ್ಲಗೆ ಹೇಳಿದ) ಇಂದು ನನ್ನ ಹೆಂಡತಿ ನಾಟಕ ನೋಡಲು ಬಂದಿದ್ದಾಳೆ. ನಾನು ಕೆಳಗೆ ಬಿದ್ದು ನಿನ್ನಿಂದ ಹೊಡೆಸಿಕೊಳ್ಳಲಾರೆ.
**ಸುಬ್ಬ:** ಪ್ರಿಯೆ, ನಾನು ನಿನ್ನನ್ನು ಅತಿಯಾಗಿ ಪ್ರೀತಿಸುತ್ತೇನೆ. ನಾನು ಆ ವಸಂತಕುಮಾರನಷ್ಟು ಸುಂದರವಾಗಿಲ್ಲ, ಮೋಹನನಷ್ಟು ಶ್ರೀಮಂತನಲ್ಲ. ಆದರೂ ನಿನಗಾಗಿ ಏನು ಬೇಕಾದರೂ ಮಾಡಬಲ್ಲೆ.
**ಸುಬ್ಬಿ:** ಹಾಗಾದರೆ, ವಸಂತಕುಮಾರನ ಮತ್ತು ಮೋಹನನ ಅಡ್ರೆಸ್ ಕೊಟ್ಟು ಪುಣ್ಯ ಕಟ್ಕೊ.




ಮೊದಲೆಲ್ಲಾ ಜನ ತಾವಾಗಿಯೇ ಬರ್ತಿದ್ರು. ಈಗ 'ಉಪಾಹಾರ' ಕೊಟ್ಟು ಕರೆಸಬೇಕು.

***

**ಮ್ಯಾನೇಜಿಂಗ್ ಡೈರೆಕ್ಟರ್:** ನಿನ್ನೆ ನಾನು ಭಾಷಣ ಮಾಡುವಾಗ ಕೆಲವು ಕಾರ್ಮಿಕರು ನಡುವೆಯೇ ಎದ್ದು ಹೋದರಲ್ಲ. ಯಾಕೆ?
**ಪಿ.ಎ.:** ಅವರಿಗೆ ನಿದ್ದೆಯಲ್ಲೇ ನಡೆಯುವ ರೂಢಿ ಇದೆ ಸರ್.

***

**ಮೊಮ್ಮಗ:** ಅಜ್ಜಿ, ನಿನಗೆ ಕಬ್ಬು ಸುಲಿಯಲು ಬರುತ್ತದೆಯೇ?
**ಅಜ್ಜಿ:** ಇಲ್ಲ, ನನ್ನ ಬಾಯಲ್ಲಿ ಹಲ್ಲೇ ಇಲ್ಲ, ಹೇಗೆ ಸುಲಿಯಲಿ?
**ಮೊಮ್ಮಗ:** ಹಾಗಾದರೆ ಈ ಕಬ್ಬನ್ನು ಹಿಡಿದುಕೋ, ನಾನು ಆಡಿ ಬರುತ್ತೇನೆ.

***

**ಗಂಡ:** ನಾನು ಇಂದು ಕೊಡೆ ಕಳೆದುಕೊಂಡೆ.
ಹೆಂಡತಿ: ಎಲ್ಲಿ? ಹೇಗೆ?
**ಗಂಡ:** ಎಲ್ಲಿ ಅಂತ ಗೊತ್ತಿಲ್ಲ. ಮಳೆ ನಿಂತ ಮೇಲೆ ಕೊಡೆ ಮಡಚಿಡಬೇಕೆಂದು ನೋಡಿದೆ. ಕೊಡೆಯೇ ಇರಲಿಲ್ಲ.

***

**ಹೆಂಡತಿ:** ನಾನು ಸತ್ತರೆ, ನೀವು ಇನ್ನೊಬ್ಬಳನ್ನು ಮದುವೆಯಾಗುತ್ತೀರಾ?
**ಗಂಡ:** ಇದಕ್ಕೆ ಉತ್ತರಿಸುವುದು ಕಠಿಣ.
**ಹೆಂಡತಿ:** ಏಕೆ?
**ಗಂಡ:** ಮತ್ತೊಂದು ಮದುವೆ ಆಗುತ್ತೇನೆ ಎಂದರೆ ನಿನಗೆ ಸಿಟ್ಟು, ಆಗಲ್ಲ ಎಂದರೆ ಅವಳಿಗೆ ಸಿಟ್ಟು.

**–ಗುರುಲಿಂಗಪ್ಪ ಈ. ಬಿರಾದಾರ,**
ವಿಜಯಪುರ

40 ವರ್ಷ ಮೇಲ್ಪಟ್ಟವರಿಗೆ ಸರ್ಕಾರದಿಂದಲೇ ದೃಷ್ಟಿ ತಪಾಸಣೆ, "ಉಚಿತ ಕನ್ನಡಕ" ವಿತರಣೆ..!!




ಕನ್ನಡ ಓದೋಕೆ ಬರೋರಿಗೆ ಮಾತ್ರ "ಉಚಿತ ಕನ್ನಡಕ"ಕೊಡೋದು ತಾನೇ..?